# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಎಂವೈಎಸ್\2700\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10/09/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಎ.ಎಸ್.ರಾಮಸ್ವಾಮಿ ಬಿನ್ ಲೆ.ಎ.ಹೆಚ್.ಸಿದ್ದಲಿಂಗಯ್ಯ, ಶಿಕ್ಷಕರು, ರಂಗಸಮುದ್ರ ಗ್ರಾಮ ಮತ್ತು ಅಂಚೆ, ಬನ್ನೂರು ಕಸಬಾ ಹೋಬಳಿ, ಟಿ.ನರಸೀಪುರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಬನ್ನೂರು ಕಸಬಾ ಹೋಬಳಿ ರಂಗಸಮುದ್ರ ಗ್ರಾಮ ಮತ್ತು ಅಂಚೆ ನಿವಾಸಿಯಾದ ಶ್ರೀ.ಎ.ಎಸ್.ರಾಮಸ್ವಾಮಿ ಬಿನ್ ಲೇ.ಎ.ಹೆಚ್.ಸಿದ್ದಲಿಂಗಯ್ಯ, ಶಾಲಾ ಮಾಸ್ತರರು (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ 1) ತಾಲ್ಲೂಕ್ ಶಿರಸ್ತೇದಾರ್, 2)ಉಪ ನಿರ್ದೇಶಕರು, 3) ನಂ.40 ನ್ಯಾಯಬೆಲೆ ಅಂಗಡಿಯ ಕಾರ್ಯದರ್ಶಿ ಹಾಗೂ 4) ಆಡಳಿತ ಮಂಡಳಿಯ ಸದಸ್ಯರು ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕ್ ಬನ್ನೂರು ಹೋಬಳಿ ರಂಗಸಮುದ್ರ ಗ್ರಾಮ ಪಂಚಾಯತ್ ವ್ಯಾಪ್ತಿಯ 40 ಪಿಎಸಿಸಿಬಿ ನ್ಯಾಯಬೆಲೆ ಅಂಗಡಿಯಲ್ಲಿ ಎಣ್ಣೆ, ಬೇಳೆ, ಸಕ್ಕರೆ, ಉಪ್ಪು ಹಾಗೂ ಇತರೆ ಅವಶ್ಯಕ ವಸ್ತುಗಳು ಬಂದಿದ್ದು, ಅವುಗಳನ್ನು ಸರಿಯಾದ ರೀತಿ ವಿತರಣೆ ಮಾಡದೇ ಕರ್ತವ್ಯ ಲೋಪ ಎಸಗಿದ್ದಾರೆ. ಈ ಬಗ್ಗೆ ದಿ:17/07/17ರಂದು 1 ಮತ್ತು 2ನೇ ಎದುರುದಾರರಿಗೆ ಹಾಗೂ ಜಿಲ್ಲಾಧಿಕಾರಿ, ಮೈಸೂರು ರವರಿಗೆ ಅರ್ಜಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆಪಾದಿಸಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು – ತಾಲ್ಲೂಕ್ ಶಿರಸ್ತೇದಾರ್ ತಮ್ಮ ಆಕ್ಷೇಪಣೆಯಲ್ಲಿ –

ದೂರಿಗೆ ಸಂಬಂಧಿಸಿದಂತೆ ಬನ್ನೂರು ಹೋಬಳಿಯ ಆಹಾರ ನಿರೀಕ್ಷಕರೊಂದಿಗೆ ಕಸಬಾ ಹೋಬಳಿ ಆಹಾರ ನಿರೀಕ್ಷಕರು ಗ್ರಾಮಕ್ಕೆ ತೆರಳಿ ಸಾರ್ವಜನಿಕರಿಂದ ಮತ್ತು ನ್ಯಾಯಬೆಲೆ ಅಂಗಡಿಗೆ ನಿಯೋಜಿತರಾಗಿರುವ ಪಡಿತರ ಚೀಟಿದಾರರಿಂದ ಹಾಗೂ ಸೊಸೈಟಿಯ ಕೆಲವು ನಿರ್ದೇಶಕರುಗಳಿಂದ ಮಾಹಿತಿ ಪಡೆದು ಸ್ಥಳ ಮಹಜರ್ ಮಾಡಿದ್ದಾರೆ. ತನಿಖಾ ಸಂದರ್ಭದಲ್ಲಿ ಹಾಜರಿದ್ದ ಗ್ರಾಮಸ್ಥರು 40–ಪಿಎಸಿಸಿಬಿ ನ್ಯಾಯಬೆಲೆ ಅಂಗಡಿಯಲ್ಲಿ ಪ್ರತಿ ತಿಂಗಳು ಸರ್ಕಾರದಿಂದ ಬಿಡುಗಡೆಯಾಗಿರುವ ಉಚಿತ ಅಕ್ಕಿ ಮತ್ತು ಪೂರಕವಾಗಿ ಬಿಡುಗಡೆಯಾಗುವ ಸಕ್ಕರೆ, ರಾಗಿ, ಉಪ್ಪು ಮತ್ತು ತಾಳೆ ಎಣ್ಣೆಯನ್ನು ಇಲಾಖೆ ನೀಡುವ ಚೆಕ್‌ಲಿಸ್ಟ್‌ನಂತೆ ವಿತರಿಸಿದ್ದಾರೆ. ಅದೇ ರೀತಿ, ಜುಲೈ, 2017ನೇ ಮಾಹೆಗೆ ತಾಳೆ ಎಣ್ಣೆ ಹಂಚಿಕೆಗೆ ಬಂದಿದ್ದು, ಸಗಟು ವಿತರಕರಲ್ಲಿ ವಿತರಣೆ ಪ್ರಮಾಣದ ಕೊರತೆಯಾದ ಹಿನ್ನೆಲೆಯಲ್ಲಿ 19 ಜನ ಅಂತ್ಯೋದಯ ಪಡಿತರ ಚೀಟಿದಾರರಿಗೆ ಮಾತ್ರ ಬಂದಿರುವ ಬಾಬ್ತು ಸರ್ಕಾರದಿಂದ ಕೆ.ಎಫ್.ಸಿ.ಎಸ್.ಸಿ ಸಗಟು ಕೇಂದ್ರದವರು ನೀಡುವ ಮೂಲ ಬಿಲ್ಲನ್ನು ದೂರುದಾರರಿಗೆ ತೋರಿಸಿ, ಪ್ರತಿ ದೃಢೀಕರಿಸಿ ನೀಡಿದ್ದಾರೆ. ಉಳಿದಂತೆ ಎಲ್ಲಾ ಪಡಿತರ ವಸ್ತುಗಳು, ಪಡಿತರ ಚೀಟಿದಾರರು ಪಡೆದುಕೊಂಡಿದ್ದಾರೆಂದು ತಿಳಿಸಿದ್ದಾರೆ. ತಾಳೆ ಎಣ್ಣೆ ಸೇರ್ಪಡೆಯಾಗಿದೆ ಅಥವಾ ವಿತರಿಸಿಲ್ಲ, ಲೋಪಗಳು ನಡೆದಿದೆ ಎಂದು ದೂರುದಾರರು ಎಸ್‌ಎಂಎಸ್ ಸಂದೇಶದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಇತರರಿಗೆ ಮನವಿ ಒಪ್ಪಿಸಿದ್ದು, ಈ ಬಗ್ಗೆ ಉಪ ನಿರ್ದೇಶಕರು, ಸದರಿಯವರ ಮನೆಯ ಬಗ್ಗೆ ವಸ್ತು ಸ್ಥಿತಿ ಪಡೆದು ತಿಳಿಸಿದ್ದಾರೆ ಮತ್ತು ದೂರುದಾರರು ಕಛೇರಿಗೆ ಭೇಟಿ ನೀಡಿ, ಮಾಹಿತಿ ಕೇಳಿದ ಸಂದರ್ಭದಲ್ಲಿ ಬನ್ನೂರು ವಿಭಾಗದ ಆಹಾರ ನಿರೀಕ್ಷಕರು ಸವಿವರವಾಗಿ ಮಾಹಿತಿಯನ್ನು ದಾಖಲೆ ಸಹಿತವಾಗಿ ವಿವರಿಸಿದ್ದಾರೆ. ಪ್ರಸ್ತುತ ತಾಳೆ ಎಣ್ಣೆ ಹಂಚಿಕೆಯನ್ನು ನಿಲ್ಲಿಸಿದೆ. ಗೋದಾಮುಗಳಲ್ಲಿ ಉಳಿದುಕೊಂಡಿದ್ದ ಬಾಬ್ತನ್ನು ಜುಲೈ, 2017ನೇ ಮಾಹೆಗೆ ಜಿಲ್ಲಾಧಿಕಾರಿಗಳ ಆದೇಶದಂತೆ ಬಿಡುಗಡೆ ಮಾಡಿದ್ದು, ರಂಗಸಮುದ್ರ ಗ್ರಾಮಕ್ಕೆ ಉಗ್ರಾಣ ಕೊರತೆಯಾಗಿದ್ದು, ಇದರೊಂದಿಗೆ ಪಿಎಸಿಸಿಬಿ ಕೇತುಪುರ, ಶ್ರೀ.ಮಹದೇವಯ್ಯ.ಎಂ., ಕೆಪ್ಪೆಹುಂಡಿ, ಪಿಎಸಿಸಿಬಿ ರಂಗಸಮುದ್ರ ಮತ್ತು ಶ್ರೀ.ಸುರೇಂದ್ರ, ಹಿಟ್ಟುವಳಿ ಗ್ರಾಮ, ಹೀಗೆ ಒಟ್ಟು 2529 ಲೀಟರ್ ವಿತರಣೆಗೆ ಸಗಟು ಕೇಂದ್ರದಲ್ಲಿ ತಾಳೆ ಎಣ್ಣೆ ದಾಸ್ತಾನಿಲ್ಲದ ಕಾರಣ, ಎತ್ತುವಳಿ ಸಾಧ್ಯವಾಗದೇ, ಸದರಿ 4 ನ್ಯಾಯಬೆಲೆ ಅಂಗಡಿಗೆ ವಿತರಣೆ ಸಾಧ್ಯವಾಗಿಲ್ಲ. ದೂರುದಾರರು ತಮ್ಮ ವಿರುದ್ಧ ದಾಖಲು ಮಾಡಿದ ದೂರನ್ನು ಒಪ್ಪುವುದಿಲ್ಲ. ಉಳಿದಂತೆ ನ್ಯಾಯಬೆಲೆ ಅಂಗಡಿಯ ವಹಿವಾಟಿನ ಬಗ್ಗೆ ಪರಿಶೀಲಿಸಿ, ಆಹಾರ ನಿರೀಕ್ಷಕರಿಂದ ವರದಿ ಪಡೆಯಲಾಗಿದ್ದು, ಸದರಿ ವರದಿಯಂತೆ ನ್ಯಾಯಬೆಲೆ ಅಂಡಿಯ ಮುಂದೆ, ಅನ್ನಭಾಗ್ಯ ಫಲಕ, ದರ ದಾಸ್ತಾನು ಫಲಕ ಇರುವುದಿಲ್ಲ, ಪಡಿತರ ಚೀಟಿದಾರರಿಗೆ ವಿತರಣೆ ಬಾಬ್ತು ಬಿಲ್ ನೀಡುತ್ತಿಲ್ಲ. ನೀಡಿರುವ ಚೆಕ್‌ಲಿಸ್ಟ್‌ಗೆ ಪಡಿತರ ಚೀಟಿದಾರರಿಂದ ಸಹಿ ಪಡೆದಿಲ್ಲ. ತೊಗರಿ ಬೇಳೆ, ಉಪ್ಪು ಮತ್ತು ಸಕ್ಕರೆ ಬಾಬ್ತು ಒಟ್ಟು ₹55/– ಬದಲಿಗೆ ₹60/–ನ್ನು ಕೆಲವರಿಂದ ಪಡೆದು, ಚಿಲ್ಲರೆ ನೀಡಿಲ್ಲ, ಕೆಲವರಿಗೆ ಪಡಿತರ ಚೀಟಿಯಲ್ಲಿ ಬಾಕಿ ಬರೆಯಲಾಗಿದೆ. ಈ ಲೋಪಗಳಿಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ವರದಿ ಕಳುಹಿಸಲಾಗುವುದೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು – ಉಪ ನಿರ್ದೇಶಕರು ತಮ್ಮ ಅಕ್ಷೇಪಣೆಯಲ್ಲಿ, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

5. ಮೂರನೇ (3ನೇ) ಎದುರುದಾರರು – ಶ್ರೀ.ಮನುರಾಜ್.ಎಂ, ಹಿಂದಿನ ಕಾರ್ಯದರ್ಶಿ, ಪ್ರಸ್ತುತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರು ದಿ:07/03/18 ಮತ್ತು 05/11/19ರ ತಮ್ಮ ಅಕ್ಷೇಪಣೆಗಳಲ್ಲಿ, ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ.

6. ನಾಲ್ಕನೇ (4ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

7. ಒಂದು (1) ಮತ್ತು 2ನೇ ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

2ನೇ ಎದುರುದಾರರು (ಕಾ.ರಾಮೇಶ್ವರಪ್ಪ) ರಾಜ್ಯ ಕಂಡ ಅತ್ಯಂತ ಭ್ರಷ್ಟ ಹಾಗೂ ಕಾನೂನು ವಂಚಕ ಸರ್ಕಾರಿ ಅಧಿಕಾರಿಯೆಂಬ ಕುಖ್ಯಾತಿಯನ್ನು ಹೊಂದಿದ್ದಾರೆ. ಸದರಿಯವರ ವಿರುದ್ಧ ಬೆಂಗಳೂರು ವಿಶೇಷ ನ್ಯಾಯಾಲಯದಲ್ಲಿ ಇನ್ನೊಂದು ಪ್ರಕರಣ ವಿಚಾರಣೆಯಲ್ಲಿದೆ. ರಾಜ್ಯ ಸರ್ಕಾರ ಹಂಚಿಕೆ ಮಾಡಿದ ಎಲ್ಲಾ ಪಡಿತರ ಪದಾರ್ಥಗಳನ್ನು ಚೀಟಿದಾರರಿಗೆ ವಿತರಿಸುವ ಹೊಣೆಗಾರಿಕೆ ಸದರಿಯವರ ಮೇಲಿದ್ದರೂ, ಅವರು ತಮ್ಮ ಕರ್ತವ್ಯವನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ್ದಾರೆಂದು ಹೇಳಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ರಂಗಸಮುದ್ರ, ಟಿ.ನರಸೀಪುರ ತಾಲ್ಲೂಕ್ ಇಲ್ಲಿ ನಡೆದ ಲೋಪದೋಷಗಳಿಗೆ ಸಂಬಂಧಿಸಿದಂತೆ, ದಿ:07/11/17ರಂದು ಆಹಾರ ನಿರೀಕ್ಷಕರು ತನಿಖೆ ನಡೆಸಿ ವರದಿ ಸಂಖ್ಯೆ:ಟಿಎನ್‌ಪಿ\ಪಿಆರ್\05\17–18ನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ [1ನೇ ಎದುರುದಾರರ ಆಕ್ಷೇಪಣೆಯ ಅನುಬಂಧ–1 ದಾಖಲೆ] ನ್ಯಾಯಬೆಲೆ ಅಂಗಡಿಯಲ್ಲಿ ಈ ಕೆಳಗಿನ ಅಂಶಗಳು ತನಿಖೆಯಲ್ಲಿ ತಿಳಿದು ಬಂದಿದೆಯೆಂದು ಹೇಳಿದೆ –

i. ನ್ಯಾಯಬೆಲೆ ಅಂಗಡಿ ಮುಂದೆ “ಅನ್ನಭಾಗ್ಯ” ಫಲಕವಿಲ್ಲ;
ii. ದರ ದಾಸ್ತಾನು ಫಲಕವಿಲ್ಲ;
iii. ಪಡಿತರ ಚೀಟಿದಾರರಿಗೆ ಪಡಿತರ ವಿತರಣೆಯ ಬಾಬ್ತು ಬಿಲ್ ನೀಡುತ್ತಿಲ್ಲ;
iv. ಚೆಕ್ ಲಿಸ್ಟ್‌ಗೆ ಪಡಿತರ ಚೀಟಿದಾರರ ಸಹಿ ಪಡೆದಿರುವುದಿಲ್ಲ;

v. ಒಂದು ಕೆ.ಜಿ ತೊಗರಿ ಬೇಳೆ, ಉಪ್ಪು ಮತ್ತು ಸಕ್ಕರೆಗೆ ಕ್ರಮವಾಗಿ ತಲಾ ₹38/– ₹2/– ಮತ್ತು ₹15/–, ಒಟ್ಟು ₹55/– ಬದಲಿಗೆ ₹60/– ಪಡೆದು ಕೆಲವರಿಗೆ ಚಿಲ್ಲರೆ ನೀಡಿಲ್ಲ, ಕೆಲವರಿಗೆ ಪಡಿತರ ಚೀಟಿಯಲ್ಲಿ 'ಬಾಕಿ' ಬರೆಯಲಾಗಿದೆ.

2) ಸದರಿ ವರದಿಯನ್ನು ಆಹಾರ ನಿರೀಕ್ಷಕರು ಸಕ್ಷಮ ಪ್ರಾಧಿಕಾರವಾದ ಹಿರಿಯ ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮೈಸೂರು ಜಿಲ್ಲೆ ರವರಿಗೆ ಸಲ್ಲಿಸಿದ್ದು, ಸದರಿಯವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿಯಮಿತ), ರಂಗಸಮುದ್ರ ರವರ ವಿರುದ್ಧ ಪ್ರಕರಣ ಸಂಖ್ಯೆ:ಉನಿಮೈ\ಎಫ್‌ಪಿಎಸ್\ ಅಮಾನತ್ತು\05\17–18ನ್ನು ದಾಖಲಿಸಿಕೊಂಡು ಸರ್ಕಾರದ ಮಾರ್ಗಸೂಚಿಗಳಂತೆ ಪಡಿತರ ವಿತರಿಸದೇ, ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡು ಬಂದ ಕಾರಣ, ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನ್ಯಾಯಬೆಲೆ ಅಂಗಡಿಯ ಪರವಾನಗಿ ಸಂಖ್ಯೆ:ಎಫ್‌ಪಿಎಸ್/62/93–94ನ್ನು ಅಮಾನತ್ತುಪಡಿಸಿ ದಿನಾಂಕ:16/02/18ರಂದು ಆದೇಶಿಸಿದೆ (2ನೇ ಎದುರುದಾರರ ಆಕ್ಷೇಪಣೆಯ ಅನುಬಂಧ–15);

3) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ರಂಗಸಮುದ್ರ ನ್ಯಾಯಬೆಲೆ ಅಂಗಡಿಯಲ್ಲಿ ಅಪಾರ ಲೋಪಗಳಾಗಿವೆಯೆಂಬ ದೂರಿನ ಹಿನ್ನೆಲೆಯಲ್ಲಿ ಸದರಿ ನ್ಯಾಯ ಬೆಲೆ ಅಂಗಡಿಯಲ್ಲಿ ಕಂಡು ಬಂದ ಲೋಪಗಳ ಬಗ್ಗೆ ಆಹಾರ ನಿರೀಕ್ಷಕರು ಮತ್ತು ತಹಶೀಲ್ದಾರ್ ಟಿ.ನರಸೀಪುರ ರವರು ತನಿಖೆ ಮಾಡಿ ವರದಿಗಳನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮೈಸೂರು ಜಿಲ್ಲೆ ರವರು ಮೇಲೆ ಹೇಳಿದ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ ದಿ:18/06/18ರಂದು ಅಂತಿಮ ಆದೇಶವನ್ನು ಹೊರಡಿಸಿದ್ದಾರೆ. ಸದರಿ ಆದೇಶ ಈ ಕೆಳಗಿನಂತಿದೆ –

| ***ವಾದಿಗಳು*** | ***ಪ್ರತಿವಾದಿಗಳು*** |
|---|---|
| *ತಹಶೀಲ್ದಾರ್* | *ಮುಖ್ಯ ಕಾರ್ಯನಿರ್ವಹಣಾಧಿಕಾರಿ* |
| *ಟಿ.ನರಸೀಪುರ* | *ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ)* |
| | *ರಂಗಸಮುದ್ರ,* |
| | *ಟಿ.ನರಸೀಪುರ ತಾಲ್ಲೂಕ್.* |

*ಪ್ರಸ್ತಾವನೆ:–*

1. *ತಹಶೀಲ್ದಾರ್ ಟಿ.ನರಸೀಪುರ ತಾಲ್ಲೂಕ್ ರವರು ದಿ:14/11/2017ರಂದು ವರದಿ ಮಾಡಿ ಗೌರವಾನ್ವಿತ ಉಪಲೋಕಾಯುಕ್ತರ ಕಛೇರಿಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರಾದ ಶ್ರೀ.ಎ.ಎಸ್.ರಾಮಸ್ವಾಮಿ ಬಿನ್ ಲೇಟ್ ಎ.ಹೆಚ್.ಸಿದ್ದಲಿಂಗಯ್ಯ ರಂಗಸಮುದ್ರ ರವರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ), ರಂಗಸಮುದ್ರ ನ್ಯಾಯಬೆಲೆ ಅಂಗಡಿಯಲ್ಲಿ ಅಪಾರ ಲೋಪಗಳಾಗಿವೆ ಎಂಬ ದೂರಿನ ಮೇರೆಗೆ ಆಹಾರ ನಿರೀಕ್ಷಕರು ನ್ಯಾಯಬೆಲೆ ಅಂಗಡಿಯಲ್ಲಿ ಕಂಡು ಬಂದ ಲೋಪಗಳ ಬಗ್ಗೆ ತನಿಖೆ ಮಾಡಿ ವರದಿ ಮಾಡಿರುತ್ತಾರೆ.*
2. *ವರದಿಯಲ್ಲಿ ಕೆಳಕಂಡ ಲೋಪಗಳು ಕಂಡು ಬಂದಿರುತ್ತವೆ.*

1) ನ್ಯಾಯಬೆಲೆ ಅಂಗಡಿ ಮುಂದೆ ಅನ್ನಭಾಗ್ಯ ಮತ್ತು ನ್ಯಾಯಬೆಲೆ ಅಂಗಡಿ ಫಲಕಗಳಿರುವುದಿಲ್ಲ;
2) ದರ ದಾಸ್ತಾನು ಫಲಕ ಪ್ರಕಟಿಸಿಲ್ಲ;
3) ವಿತರಣೆಗೆ ಸಂಬಂಧಿಸಿದಂತೆ ಚೆಕ್ ಲಿಸ್ಟ್‌ನ್ನು ಅಂಗಡಿಯ ಮುಂದೆ ಪ್ರದರ್ಶನ ಮಾಡಿರುವುದಿಲ್ಲ;
4) ಚೆಕ್ ಲಿಸ್ಟ್‌ಗೆ ಪಡಿತರ ಚೀಟಿದಾರರಿಂದ ಸಹಿ ಪಡೆದಿರುವುದಿಲ್ಲ;
5) ವಿತರಣೆ ಪ್ರಮಾಣ 1 ಕೆ.ಜಿ ತೊಗರಿ ಬೇಳೆ–₹38/–, ಉಪ್ಪು–₹2/–, ಸಕ್ಕರೆ– ₹15/– ಜುಲೈ, 2017ನೇ ಮಾಹೆಯಲ್ಲಿ ₹55/– ಬದಲಿಗೆ ₹60/– ಪಡೆದು ₹5/– ಹೆಚ್ಚಿಗೆ ಪಡೆದಿದ್ದು, ಕೆಲವರಿಗೆ ಪಡಿತರ ಚೀಟಿಯಲ್ಲಿ 'ಬಾಕಿ' ಬರೆದು ಕೊಟ್ಟಿರುತ್ತಾರೆ;
6) ಪಡಿತರ ವಿತರಿಸಿದ ಬಾಬ್ತು ಹಣ ಸ್ವೀಕೃತಿ ಬಿಲ್ ನೀಡಿರುವುದಿಲ್ಲ;
7) ಪಡಿತರ ವಿತರಣೆಗೆ ಸಂಬಂಧಿಸಿದಂತೆ ದಾಸ್ತಾನು| ವಿತರಣೆ ವಹಿಗಳನ್ನು ನಿಗಧಿತ ನಮೂನೆಗಳಲ್ಲಿ ನಿರ್ವಹಿಸಿರುವುದಿಲ್ಲ.

3. ಮೇಲ್ಕಂಡ ಲೋಪಗಳಿಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿ ಕಾರ್ಯದರ್ಶಿಯಾದ ಎಂ.ಮನುರಾಜ್ ಬಿನ್ ಮರಿಸ್ವಾಮಿ ಇವರು ಹೇಳಿಕೆ ನೀಡಿ ನಮ್ಮ ಸಹಕಾರ ಸಂಘದಲ್ಲಿ ಏಕೈಕ ನೌಕರನಿದ್ದು ಸೊಸೈಟಿಯಲ್ಲಿ ರೈತರಿಗೆ ಸಾಲ ನೀಡುವುದು ವಸೂಲಾತಿ/ ತಿರುವಳಿ ಮತ್ತು ರಸಗೊಬ್ಬರ ವಿತರಣೆ, ಪಡಿತರ ವಸ್ತುಗಳ ಎತ್ತುವಳಿ, ವಿತರಣೆ, ಸೀಮೆಎಣ್ಣೆ ವಿತರಣೆ ಮಾಡಬೇಕಾಗಿರುವುದರಿಂದ ಮೇಲ್ಕಂಡ ನ್ಯೂನ್ಯತೆಗಳು ಆಗಿವೆ ಎಂದು ತಿಳಿಸಿರುವುದಾಗಿ ತಹಶೀಲ್ದಾರ್ ರವರು ವರದಿ ಮಾಡಿರುತ್ತಾರೆ.

4. ಮೇಲಿನ ಖಂಡಿಕೆ–2ರಲ್ಲಿ ತಿಳಿಸಿರುವ (1) ರಿಂದ (7) ಲೋಪಗಳನ್ನು ಎಸಗಿರುವುದರಿಂದ ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 2016ರ ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲು ತಹಶೀಲ್ದಾರ್ ಟಿ.ನರಸೀಪುರ ತಾಲ್ಲೂಕ್ ರವರು ಶಿಫಾರಸ್ಸು ಮಾಡಿರುತ್ತಾರೆ.

5. ವಾದಿಗಳು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ), ರಂಗಸಮುದ್ರ ನ್ಯಾಯಬೆಲೆ ಅಂಗಡಿಯವರು ಸರ್ಕಾರ ನೀಡಿರುವ ಮಾರ್ಗಸೂಚಿಗಳಂತೆ ಪಡಿತರ ವಸ್ತುಗಳ ವಿತರಣೆಯನ್ನು ನಿರ್ವಹಿಸದೇ ಇರುವುದು ಸ್ಪಷ್ಟವಾಗಿದೆ. ಸದರಿ ಸಂಘದಲ್ಲಿ ಒಬ್ಬನೇ ನೌಕರನಿರುವುದಾಗಿ ತಿಳಿಸಿರುವುದರಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013ರಡಿ ಪಡಿತರ ಪದಾರ್ಥಗಳನ್ನು ತಿಂಗಳ 01 ತಾರೀಖಿನಿಂದ 10ನೇ ತಾರೀಖಿನೊಳಗೆ ವಿತರಿಸಲು ಸಾಧ್ಯವಾಗುವುದಿಲ್ಲ ಹಾಗೂ ಈಗಾಗಲೇ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ), ರಂಗಸಮುದ್ರ ರವರು ಜುಲೈ, 2017ರ ಮಾಹೆಯಲ್ಲಿ ರಾಷ್ಟ್ರೀಯ ಭದ್ರತಾ ಕಾಯಿದೆ, 2013 ಹಾಗೂ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ 2016ರ ಕ್ಲಾಜ್ 3, 12, 14, 18 ಹಾಗೂ ಕರ್ನಾಟಕ ಅಗತ್ಯ ವಸ್ತುಗಳ (ಲೆಕ್ಕಪತ್ರ ನಿರ್ವಹಣೆ, ದಾಸ್ತಾನು ಮತ್ತು ಬೆಲೆ ಪ್ರಕಟಣೆ) ಆದೇಶ 1981ರ ಕ್ಲಾಜ್ 3, 4, 5, 6, 8, 9 ಉಲ್ಲಂಘಿಸಿರುವುದರಿಂದ ವಿಚಾರಣೆಗೆ ಕಾಯ್ದಿರಿಸಿ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಅಮಾನತ್ತು ಪಡಿಸಿ ಆದೇಶಿಸಲಾಗಿತ್ತು ಹಾಗೂ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಕಾರಣ ಕೇಳಿ ನೋಟೀಸ್ ಅನ್ನು ನೀಡಲಾಗಿತ್ತು ಈ ಬಗ್ಗೆ ನ್ಯಾಯಬೆಲೆ ಅಂಗಡಿಯವರು ಈ ಕಛೇರಿಗೆ ಸಮಜಾಯಿಸಿಯನ್ನು ಸಲ್ಲಿಸಿ ನಾನು ಪಡಿತರ ವಿತರಣೆಯಲ್ಲಿ ಯಾವುದೇ ಲೋಪವೆಸಗಿರುವುದಿಲ್ಲವೆಂದು, ಆದುದರಿಂದ ನನ್ನ ವಿರುದ್ಧ ಮಾಡಿರುವ ಆರೋಪಗಳನ್ನು ಕೈ ಬಿಡಬೇಕೆಂದು ವಿನಂತಿಸಿರುತ್ತಾರೆ.

ಸರ್ಕಾರದ ಆದೇಶ ನಂ.ಎಫ್‌ಸಿಎಸ್ 17 ಆರ್‌ಪಿಆರ್ 2011(1) ದಿ:10.06.2016ರ ಕ್ಲಾಜ್ 12(2)ರಲ್ಲಿ ಈ ರೀತಿ ಹೇಳಲಾಗಿದೆ ಈ ಆದೇಶದ ಅಡಿ

ದಾಖಲಾಗುವ ಪ್ರಕರಣಗಳ ಬಗ್ಗೆ 90 ದಿನಗಳೊಳಗಾಗಿ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸ ಬೇಕೆಂದಿರುತ್ತದೆ.

**ಸರ್ಕಾರದ ಆದೇಶ ನಂ.ಎಫ್‌ಸಿಎಸ್ 17 ಆರ್‌ಪಿಆರ್ 2011(1) ದಿ:10.06.2016 ಹಾಗೂ ದಿ:05.06.2017ರ ತಿದ್ದುಪಡಿ ಆದೇಶದ ಕ್ಲಾಜ್ 3(1)(ಇ)ರಲ್ಲಿ ಈ ರೀತಿ ಹೇಳಲಾಗಿರುತ್ತದೆ.**

*"Authorized Authority" means the Deputy Director of the Food, Civil Supplies and Consumer Affairs Department of Revenue district concerned, in the rural, urban and the Informal rationing areas in the district concerned (except Bengaluru informal rationing area) and the Deputy Director of the concerned range in Bengaluru Informal Rationing Area."*

ಸದರಿ ನ್ಯಾಯಬೆಲೆ ಅಂಗಡಿ ಬಗ್ಗೆ ಆದೇಶ ಹೊರಡಿಸಲು ಮೇಲ್ಕಂಡ ಆದೇಶದಲ್ಲಿ ಉಪ ನಿರ್ದೇಶಕರಿಗೆ ಅಧಿಕಾರ ದತ್ತವಾದ ಕಾರಣ ವಿಚಾರಣೆಗಾಗಿ ದಿನಾಂಕಗಳನ್ನು ನಿಗಧಿಪಡಿಸಲಾಯಿತು.

ನ್ಯಾಯಬೆಲೆ ಅಂಗಡಿ ಮಾಲೀಕರು ಸಲ್ಲಿಸಿರುವ ಸಮಜಾಯಿಷಿಯಲ್ಲಿ ಅವರ ವಿರುದ್ಧ ಮಾಡಿರುವ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲವಾದ್ದರಿಂದ ಈ ಬಗ್ಗೆ ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ಆದೇಶ ಹೊರಡಿಸುವುದು ಸೂಕ್ತವೆಂದು ಈ ಪ್ರಾಧಿಕಾರಕ್ಕೆ ಕಂಡು ಬಂದಿದ್ದರಿಂದಾಗಿ ಸದರಿಯವರನ್ನು ದಿನಾಂಕ:29.05.2018, 05.06.2018 ಮತ್ತು 13.06.2018ರಂದು ವಿಚಾರಣೆಗೆ ಒಳಪಡಿಸಲಾಯಿತು.

ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಹಾಗೂ ತಹಶೀಲ್ದಾರ್, ಟಿ.ನರಸೀಪುರ ತಾಲ್ಲೂಕು ರವರು ಸಲ್ಲಿಸಿರುವ ವರದಿಗಳನ್ನು ಮತ್ತು ನ್ಯಾಯಬೆಲೆ ಅಂಗಡಿಯವರು ಸಲ್ಲಿಸಿರುವ ಸಮಜಾಯಿಷಿಯನ್ನು ಪರಿಶೀಲಿಸಲಾಯಿತು. ನ್ಯಾಯಬೆಲೆ ಅಂಗಡಿಯವರು ಪಡಿತರ ವಸ್ತುಗಳನ್ನು ವಿತರಿಸುವಲ್ಲಿ ಗುರುತರವಾದ ಆರೋಪಗಳನ್ನು ಮಾಡಿರುವುದು ಕಂಡು ಬಂದಿರುವುದಿಲ್ಲವಾದ್ದರಿಂದ ಸದರಿಯವರಿಗೆ ಈ ಬಾರಿ ಎಚ್ಚರಿಕೆ ನೀಡಿ ಪಡಿತರ ವಸ್ತುಗಳನ್ನು ವಿತರಿಸಲು ಆದೇಶ ನೀಡುವುದು ಸೂಕ್ತವೆಂದು ಈ ಪ್ರಾಧಿಕಾರಕ್ಕೆ ಕಂಡು ಬಂದಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸಂಖ್ಯೆ:ಉನಿಮೈ|ಎಫ್‌ಪಿಎಸ್|ಅಮಾನತ್ತು|05|17-18 ದಿ:18/06/18

**ಆದೇಶ**

ಪ್ರಸ್ತಾವನೆ ಅಂಶಗಳನ್ನು ಪರಿಶೀಲಿಸಲಾಯಿತು, ಟಿ.ನರಸೀಪುರ ತಾಲ್ಲೂಕ್, ರಂಗಸಮುದ್ರ ಗ್ರಾಮದ ಪಿಎಸಿಸಿಬಿ ಸಂಘದವರು ಪಡಿತರ ವಿತರಣೆಯಲ್ಲಿ ಗಂಭೀರವಾದ ಲೋಪದೋಷಗಳನ್ನು ಮಾಡಿರುವುದು ಕಂಡು ಬಂದಿಲ್ಲವಾದ್ದರಿಂದ ಮಂಟೇಸ್ವಾಮಿ, ಉಪನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಮೈಸೂರು ಜಿಲ್ಲೆ ಆದ ನಾನು ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ತಿದ್ದುಪಡಿ ಆದೇಶ 2017 ಕ್ಲಾಜ್ 3(1)(ಇ) ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಇನ್ನು ಮುಂದೆ ಪಡಿತರ ವಿತರಣೆಯಲ್ಲಿ ಲೋಪ ದೋಷ ಮಾಡಬಾರದೆಂದು ಸದರಿ ಸಂಘದ ನ್ಯಾಯಬೆಲೆ ಅಂಗಡಿಯವರಿಗೆ ಎಚ್ಚರಿಕೆ ನೀಡುತ್ತಾ ಸದರಿ ಸಂಘದವರು ಸರ್ಕಾರಕ್ಕೆ ಸಲ್ಲಿಸಿದ್ದ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ನ್ಯಾಯಬೆಲೆ ಅಂಗಡಿಯ ಪ್ರಾಧಿಕಾರ ಅಮಾನತ್ತುಪಡಿಸಿ ಹೊರಡಿಸಿದ್ದ ಆದೇಶವನ್ನು ತೆರವುಗೊಳಿಸಿ ಆದೇಶಿಸಿದೆ. ತಹಶೀಲ್ದಾರ್, ಟಿ.ನರಸೀಪುರ ತಾಲ್ಲೂಕ್ ರವರು ಸದರಿ ನ್ಯಾಯಬೆಲೆ ಅಂಗಡಿಗೆ ನಿಯಮಾನುಸಾರ ಪಡಿತರ ವಿತರಿಸಲು ಆದೇಶಿಸಿದೆ.

ಮಂಟೇಸ್ವಾಮಿ,
ಉಪನಿರ್ದೇಶಕರು,
ಆಹಾರ ನಾಗರೀಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ
ಇಲಾಖೆ, ಮೈಸೂರು ಜಿಲ್ಲೆ."

4) ಮೇಲೆ ಹೇಳಿದ ಲೋಪಗಳು ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ, 2016, ಪರವಾನಿಗೆಯ ಷರತ್ತು ಸಂಖ್ಯೆ:3 ರಿಂದ 10 ಮತ್ತು ವಿಶೇಷ ನಿಬಂಧನೆ 15, 16, 17 ಮತ್ತು 19(ಸಿ)(ಡಿ) ಗಳನ್ನು ಹಾಗೂ ಕರ್ನಾಟಕ ಅಗತ್ಯ ವಸ್ತುಗಳ (ಲೆಕ್ಕಪತ್ರ ನಿರ್ವಹಣೆ, ಬೆಲೆ ಮತ್ತು ದಾಸ್ತಾನು ಪ್ರಕಟಣೆ) ಆದೇಶ, 1951ರ ಷರತ್ತುಗಳನ್ನು ಉಲ್ಲಂಘಿಸಿದೆಯೆಂದು ಸದರಿ ಆದೇಶದಲ್ಲಿ ಹೇಳಿದೆ;

5) ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಮೈಸೂರು ಜಿಲ್ಲೆ ರವರು ವಿಚಾರಣೆ ನಡೆಸಿ ಮೇಲಿನ ಉಪ ಖಂಡಿಕೆ–3ರಲ್ಲಿ ಹೇಳಿದಂತಹ ಆದೇಶವನ್ನು ಹೊರಡಿಸಿದ್ದು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ರಂಗಸಮುದ್ರ ರವರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ. 3ನೇ ಎದುರುದಾರರು ಸಲ್ಲಿಸಿದ ಸೇವಾ ವಿವರದನ್ವಯ, ಸದರಿಯವರು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿ ದಿ:06/11/14 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಮೇಲೆ ಹೇಳಿದ ಲೋಪದೋಷಗಳಿಗೆ ಸದರಿಯವರೇ ಜವಾಬ್ದಾರರೆಂದು ಮೇಲ್ನೋಟಕ್ಕೆ ಕಂಡು ಬಂದಿದೆ;

6) ಸದರಿ ಲೋಪದೋಷಗಳಿಗೆ 1, 2 ಮತ್ತು 4ನೇ ಎದುರುದಾರರುಗಳು ಜವಾಬ್ದಾರರಾಗಿರುವುದಿಲ್ಲ.

9. ಕಾರಣ, ಶ್ರೀ.ಮನುರಾಜ್.ಎಂ, ಹಿಂದಿನ ಕಾರ್ಯದರ್ಶಿ [ಪ್ರಸ್ತುತ ಮುಖ್ಯ ಕಾರ್ಯನಿರ್ವಹಣಾಧಿಕಾರಿ], ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ರಂಗಸಮುದ್ರ, ಟಿ.ನರಸೀಪುರ ತಾಲ್ಲೂಕ್ – 3ನೇ ಎದುರುದಾರರು ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೇ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಕಾರಣ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ರಂಗಸಮುದ್ರ, ಟಿ.ನರಸೀಪುರ ತಾಲ್ಲೂಕ್ ಉಪವಿಧಿಗಳನ್ವಯ ಸದರಿಯವರ ವಿರುದ್ಧ ಶಿಸ್ತು ಕ್ರಮವನ್ನು The Karnataka Co-operative Societies Rules, 1960 ರನ್ವಯ ನಡೆಸುವಂತೆ ಸಂಘದ ಆಡಳಿತ ಮಂಡಳಿಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ

19/9/20

**(ನ್ಯಾಯಾಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**